ಶ್ರೀ ಬಿ. ರಾಚಯ್ಯ.—ತಾ : 1-6-1983 ರಿಂದ ಈಚೆಗೆ ಮಾಡುವುದಕ್ಕಾಗುವುದಿಲ್ಲ. ಮೇ 22ನೇ ತಾರೀಖಿನಲ್ಲಿ ಪ್ರಾಥಮಿಕ ಶಾಲಾ ಉಪಾಧ್ಯಾಯರು ಅವರ ಕೆಲಸದಮೇಲೆ ಹೋಗಬೇಕಾಗಿರುವುದರಿಂದ ಆ ತಿಂಗಳಲ್ಲಿ ಮಾತ್ರ ಮಾಡಿ ಉಳಿದ ಸಂದರ್ಭದಲ್ಲಿ ಮಾಡುವುದಕ್ಕಾಗುವುದಿಲ್ಲ. ಮುಂದೆ ಅಂಥಾದ್ದು ಏನಾದರೂ ಬಂದಾಗ ಪರಿಶೀಲಿಸಲಾಗುತ್ತದೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ವರ್ಗ ಮಾಡುವುದನ್ನು ಆಯಾಯ ಡಿ.ಡಿ.ಪಿ.ಐ. ಗಳಿಗೆ ಅಥವಾ ಜಾಯಿಂಟ್ ಡೈರೆಕ್ಟರ್‌ಗಳಿಗೆ, ಅಥವಾ ಡೈರೆಕ್ಟರ್‌ಗಳಿಗೆ ಕೊಡುತ್ತೀರಾ ? ಮಂತ್ರಿಗಳೇ ಈ ಅಧಿಕಾರವನ್ನು ಇಟ್ಟುಕೊಂಡು ಇಲ್ಲಿ ಕುಳಿತರೆ ಎಲ್ಲೋ ಮೂಲೆಯಲ್ಲಿರತಕ್ಕ ಬಡ ಉಪಾಧ್ಯಾಯರು ಇಲ್ಲಿಗೆ ಬಂದು ಹೋಗುವುದಕ್ಕೆ ಬಹಳ ಕಷ್ಟವಾಗುತ್ತದೆ. ಈ ವಿಚಾರವನ್ನು ಪರಿಶೀಲಿಸುತ್ತೀರಾ ? ಇದರಿಂದ ನಿಮ್ಮ ಕೆಲಸವೂ ಕೂಡ ಸುಲಭವಾಗುತ್ತದೆ.

ಶ್ರೀ ಬಿ. ರಾಚಯ್ಯ.—ಇದನ್ನು ಪರಿಶೀಲಿಸುತ್ತೇನೆ. ಆದರೆ ಒಂದು ವಿಷಯ. 5 ವರ್ಷದೊಳಗೆ ಆಗಬೇಕಾದರೆ ಹಿಂದೆ ಮುಖ್ಯಮಂತ್ರಿಗಳ ಕೈಯಲ್ಲಿತ್ತು. ಈಗ ಇದನ್ನು ನಮಗೆ ಕೊಟ್ಟಿದ್ದಾರೆ. ನಾನೂ ಕೂಡ ಇದನ್ನು...

ವಿಷಯ : ತಿಪಟೂರು ತಾಲ್ಲೂಕಿನಲ್ಲಿರುವ ಕಲ್ಯಾಣಿಗಳು.

ಪ್ರ. 219 (177) ಶ್ರೀ ಎಸ್. ಪಿ. ಗಂಗಾಧರಪ್ಪ (ತಿಪಟೂರು)*.—ಗ್ರಾಮಾಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ ?

(ಅ) ತಿಪಟೂರು ತಾಲ್ಲೂಕಿನ ಹಳ್ಳಿಗಳಲ್ಲಿ ಇರುವ ದೊಡ್ಡ ಕಲ್ಯಾಣಿಗಳ ಸಂಖ್ಯೆ ಎಷ್ಟು ;

(ಆ) ಇವುಗಳ ಪೈಕಿ ನೀರು ಇದ್ದು ಉಪಯೋಗದಲ್ಲಿರುವ ಕಲ್ಯಾಣಿಗಳ ಸಂಖ್ಯೆ ಎಷ್ಟು ;

(ಇ) ಸದರಿ ಕಲ್ಯಾಣಿಗಳಲ್ಲಿರುವ ಹೂಳನ್ನು ತೆಗೆಯಲು ಮತ್ತು ಅವುಗಳನ್ನು ಸ್ವಚ್ಛಗೊಳಿಸಲು ಸರಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಕೆ. ಹೆಚ್. ರಂಗನಾಥ್.—ಇದನ್ನು ನೀವೂ ಕೂಡ ಅವರಿಗೆ ಕೊಡಿ.

ಶ್ರೀ ಹೆಚ್. ಗಂಗಾಧರನ್.—ಹಾಗೆ ಮಾಡಿದರೆ ಅದು ಬಿಸಿನೆಸ್ ಆಗುತ್ತದೆ.

ಶ್ರೀ ಬಿ. ರಾಚಯ್ಯ.—ಇದನ್ನು ಡಿ.ಪಿ.ಎ.ಆರ್. ನವರನ್ನು ಕೇಳಿ ಮಾಡುತ್ತೇವೆ.

ಶ್ರೀ ಕೆ. ಹೆಚ್. ರಂಗನಾಥ್.—ಡಿ.ಪಿ.ಎ.ಆರ್ ನವರನ್ನು ಕೇಳುವುದು ಏನು ಬಂತು ? ಮಂತ್ರಿಗಳೇ ಮಾಡಬಹುದು. ನಿವೃತ್ತರಾಗುವುದಕ್ಕೆ ಒಂದೆರಡು ವರ್ಷ ಇರುವವರು ತಮ್ಮ ಊರಿನ ಹತ್ತಿರವೇ ಹಾಕಬೇಕೆಂದು ಕೇಳಿಕೊಳ್ಳುತ್ತಾರೆ. ಏಕೆಂದರೆ ಅವರನ್ನು ದೂರಕ್ಕೆ ಹಾಕಿರುತ್ತಾರೆ. ಅವರು ಅಲ್ಲಿ ಒಂದು ವರ್ಷ ಕೆಲಸ ಮಾಡಿ ಪ್ರಿಮೆಚೂರ್ ಟ್ರಾನ್ಸ್ಫರ್‌ಗೋಸ್ಕರ ಮಂತ್ರಿಗಳ ಹತ್ತಿರ ಬರಬೇಕಾಗುತ್ತದೆ. ನನ್ನಂಥವರನ್ನು ಯಾರನ್ನಾದರೂ ಹಿಡಿದುಕೊಂಡು ಅವರು ಓಡಾಡಬೇಕಾಗುತ್ತದೆ. ಇದಕ್ಕೆ ಬದಲಾಗಿ ಆಯಾಯ ಡಿ.ಡಿ.ಪಿ.ಐ.ಗಳಿಗೇ ಅಧಿಕಾರವನ್ನು ಕೊಡಿ. ಅವರು ತಪ್ಪು ಮಾಡಿದರೆ ಅವರನ್ನು ದಂಡಿಸಿ ಕ್ರಮ ತೆಗೆದುಕೊಳ್ಳಿ. ಎಲ್ಲವನ್ನೂ ನೀವೇ ಇಟ್ಟುಕೊಂಡರೆ ಕೆಲಸವಾಗುವುದು ಹೇಗೆ ಸಾಧ್ಯ ?

ಶ್ರೀ ಬಿ. ರಾಚಯ್ಯ.—ನನ್ನ ಇಲಾಖೆ ಬಗ್ಗೆ ಹೇಳುವುದಾದರೆ, ನನ್ನ ಅಪೇಕ್ಷೆಯನ್ನು ಈಗಾಗಲೇ ಹೇಳಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—8126 ವರ್ಗಾವಣೆಯ ಪೈಕಿ 3322 ಜನರದ್ದು ಅವಧಿಗೆ ಮೊದಲೇ ಆಗಿದೆ. ಅದನ್ನು ಮಂತ್ರಿಗಳು ಮಾಡಿರಬಹುದು. ಏಕೆಂದರೆ ಮುಖ್ಯಮಂತ್ರಿಗಳು ತಮ್ಮಲ್ಲಿದ್ದ ಅಧಿಕಾರವನ್ನು ಮಂತ್ರಿಗಳಿಗೆ ಕೊಟ್ಟಿರುವುದರಿಂದ ಇನ್ನುಳಿದ ವರ್ಗಾವಣೆಗಳಲ್ಲಿ ಮಂತ್ರಿಗಳ ಹಸ್ತಕ್ಷೇಪದಿಂದ ಆಗಿರುವುದು ಎಷ್ಟು ? ಅಧಿಕಾರಿಗಳ ಹಸ್ತಕ್ಷೇಪದಿಂದ ಆಗಿರುವುದು ಎಷ್ಟು ? ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ರಾಚಯ್ಯ.—ನನ್ನ ಹಸ್ತಕ್ಷೇಪದಿಂದ ಯಾವುದೂ ಇಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಹಸ್ತಕ್ಷೇಪ ಎಂದರೆ ನೀವೇ ಎಷ್ಟು ಮಾಡಿದಿರಿ ಎಂದು ಅವರು ಕೇಳಿದ್ದು.

ಒಬ್ಬ ಮಾನ್ಯ ಸದಸ್ಯರು.—ನನಗೆ ತಿಳಿದ ಪ್ರಕಾರ ಟ್ರಾನ್ಸ್ಫರ್‌ಗೋಸ್ಕರ 25 ಸಾವಿರ ಅರ್ಜಿಗಳು ಬಂದಿದ್ದು ಪ್ರಿಮೆಚೂರ್ ಟ್ರಾನ್ಸ್ಫರ್‌ಗೆ 16 ಸಾವಿರ ಅರ್ಜಿಗಳು ಬಂದಿದ್ದುವಂತೆ, ಇದು ನಿಜವೆ ?

ಶ್ರೀ ಬಿ. ರಾಚಯ್ಯ.—ನಿಜ ಸ್ವಾಮಿ.

---

* ಮಾನ್ಯ ಸದಸ್ಯರು ಹಾಜರಿರಲಿಲ್ಲ.